# ಮಾತು ಮಾಣಿಕ್ಯ

ದಿನಗಳು ಬಣ್ಣಗೆಡುತ್ತಿವೆ. ಎಲ್ಲರನ್ನೂ ಬೆಸೆಯಬೇಕಾಗಿದ್ದ ಭಾಷೆಯೇ ಇಂದು ಎಲ್ಲರ ಹೃದಯಗಳ ಕವಾಟಗಳನ್ನು ಮುಚ್ಚುತ್ತಿರುವ ಹೀನಾತಿಹೀನ ಸ್ಥಿತಿಗೆ ಸಮಾಜ ತಲುಪಿರುವುದು ಯಾವುದರ ಮುನ್ಸೂಚನೆಯೊ ತಿಳಿಯದು! ತಮ್ಮ ನಿಲುವಿಗೆ ಎದುರಾಗಿ ಭಿನ್ನಮತ ಹೊಂದಿರುವವರನ್ನು ಕೊಲ್ಲಲೆಂದೇ ಭಾಷೆಯ ವಿಷಗುಳಿಗೆಗಳು ತಯಾರಾಗುತ್ತಿವೆ. ಸಾರ್ವಜನಿಕ ಜೀವನದಲ್ಲಿರುವವರ ಎದೆಯಲ್ಲಿ ದ್ವೇಷದ ಒಲೆ ನಿರಂತರವಾಗಿ ಹೊತ್ತಿ ಉರಿಯುತ್ತಿದೆ. ಜನಸಾಮಾನ್ಯರ ಸಣ್ಣ ಸಣ್ಣ ಸಂತೋಷಗಳನ್ನೇ ಕಿತ್ತುಕೊಳ್ಳುತ್ತಿರುವ ವಿವೇಕಹೀನರ ನಂಜಿನ ಮಾತುಗಳು ಭಯ ಹುಟ್ಟಿಸುತ್ತಿವೆ.

‘ಸಂಸ್ಕೃತಿಯ ಅಂಗೋಪಾಂಗಗಳಲ್ಲಿ ಭಾಷೆಯೂ ಒಂದು ಮಹತ್ವದ ವಿಷಯ. ನಾಡಿನ ಸಂಸ್ಕೃತಿಯ ಮಟ್ಟವನ್ನು ಅಲ್ಲಿಯ ಭಾಷೆಯಲ್ಲಿ ಚೆನ್ನಾಗಿ ಕಂಡುಹಿಡಿಯಬಹುದು’ ಎಂದು ಶಂಬಾ ಜೋಷಿ ಹೇಳಿರುವ ಮಾತು ಔಚಿತ್ಯಪೂರ್ಣವಾಗಿದೆ. ಭಾಷೆ ಕೇವಲ ಪದಪುಂಜವಲ್ಲ! ಅದಕ್ಕೊಂದು ಭೌಗೋಳಿಕತೆ, ಜ್ಞಾನ, ವ್ಯಕ್ತಿತ್ವ ಮತ್ತು ಔದಾರ್ಯ ಪರಂಪರೆಯ ಸಂಸ್ಕೃತಿಯ ಲೇಪನವೂ ಇದೆ. ಬೇರೊಬ್ಬರ ತೇಜೋವಧೆಗೆ ಭಾಷೆಯನ್ನು ಬಳಸುವುದಾದರೆ, ಅದೇ ಭಾಷೆಯ ಇನ್ನೊಂದು ತುದಿ, ಅಂತಹ ಭಾಷೆ ಬಳಸುವವನ ವ್ಯಕ್ತಿತ್ವವನ್ನೂ ಅನಾವರಣ ಮಾಡುತ್ತಿರುತ್ತದೆ! ನಾವು ಬಳಸುವ ಭಾಷೆ ನಮ್ಮ ವ್ಯಕ್ತಿತ್ವಕ್ಕೆ ಹಿಡಿದ ಪುಟ್ಟ ಕನ್ನಡಿ. ‘ಭಾಷೆಯೆಂಬುದು ಪ್ರಾಣಘಾತಕ’ವಾಗುವುದು ಸೌಜನ್ಯವಲ್ಲದ ನಡೆಯಲ್ಲಿಯೇ ಎಂದು ಪ್ರಭುದೇವರು ಎಚ್ಚರಿಸುತ್ತಾರೆ. ವ್ಯಕ್ತಿಯಾದವನು ತನ್ನ ತಪ್ಪುಗಳಿಂದ ಸಾಯುವುದಿಲ್ಲ! ಆಡುವ ನಂಜಿನ ಭಾಷೆಯಿಂದ ತನ್ನ ಗೋರಿಗೆ ತಾನೇ ಕಾಲಿಡುತ್ತಾನೆ. ಭಾಷೆಯಲ್ಲಿರುವ ಇಂತಹ ಘಾತಕತನವನ್ನು ಅರಿತಿದ್ದ ನಮ್ಮ ವಚನಕಾರರು ಮತ್ತು ತತ್ವಸಾಧಕರು ನುಡಿಯನ್ನು ಹೇಗೆ ಬಳಸಬೇಕೆಂದು ನಮಗೆ ತೋರಿಸಿಕೊಟ್ಟಿದ್ದಾರೆ. ‘ಮೂರ್ಖನಿಗೆ ಅವನ ಮೂರ್ಖತನದ ಮಟ್ಟದಲ್ಲಿ ಉತ್ತರಿಸಬೇಡ’ ಎನ್ನುವುದು ತತ್ವಜ್ಞಾನಿಯೊಬ್ಬನ ಮಾತು. ವಿವೇಕವಂತರ ಅನುಭವದ ನುಡಿ ನಮಗೆ ದಾರಿದೀಪ.

ಭಾರತದಲ್ಲಿಂದು ಪರವಿಚಾರ ಮತ್ತು ಪರಧರ್ಮಗಳನ್ನು ಗೌರವಿಸುವಂಥ, ಸಭ್ಯ ಮಾತುಗಳಿಂದ ಭಿನ್ನಮತ ಹೊಂದಿದವರನ್ನೂ ಮಣಿಸುವ ಉದಾರವಾದಿ ಚಿಂತನೆಯ ಕಾಲ ಅವಸಾನದ ಅಂಚಿಗೆ ಬಂದು ತಲುಪಿದೆ. ತಾವು ನಂಬಿರುವ ನಿರ್ದಿಷ್ಟ ರಾಜಕೀಯ ಮತ್ತು ಧಾರ್ಮಿಕ ನಿಲುವುಗಳನ್ನು ಒಪ್ಪದವರನ್ನು ಸುಲಭವಾಗಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಸ್ಥಿತಿ ಅತಿ ವೇಗದಲ್ಲಿ ಜರುಗುತ್ತಿದೆ. ಹಾಗೆಯೇ ಉದಾರವಾದಿ ಚಿಂತನೆಯುಳ್ಳವರಿಗೆ ನ್ಯಾಯಾಲಯಗಳು ನೀಡುವ ತೀರ್ಪಿಗಿಂತ ಮೊದಲು ಅಸಭ್ಯರೇ ತ್ವರಿತ ವೇಗದಲ್ಲಿ ತೀರ್ಪು ನೀಡಿ ಷರಾ ಬರೆಯುತ್ತಿರುವುದು ಕಾಲದ ವ್ಯಂಗ್ಯವಾಗಿದೆ. ಇವರೆಲ್ಲ ಸತ್ವದ ಬೆಳಕನ್ನು ಕಾಣಲು ಅಸಮರ್ಥರಾಗಿರುವವರು. ಇದನ್ನು ನೋಡಿಯೇ ‘ಬೈಗುಳ ಹೇಡಿಗಳ ಭಾಷೆ’ ಎಂದು ಹೇಳುತ್ತಾರೆ. ಭಾಷೆಯನ್ನು ಒಂದುಗೂಡಿಸಲು, ಭಾಷೆಯನ್ನು ಸಾಮರಸ್ಯಕ್ಕಾಗಿ, ಭಾಷೆಯನ್ನು ಮಾನವತೆಗಾಗಿ ಬಳಸುತ್ತಿದ್ದ ದಿನಗಳು ದ್ವೇಷದ ಮಂಜಿನಲ್ಲಿ ಮರೆಯಾಗುತ್ತಿರುವುದನ್ನು ನಾವು ಅಸಹಾಯಕರಾಗಿ ನೋಡುತ್ತಿದ್ದೇವೆ. ವಿಷಲೇಪಿತ ಕಟು ಮಾತುಗಳು ನಮ್ಮ ಸಮಾಜದ ಇಡೀ ದೇಹವನ್ನು ಗಾಸಿಗೊಳಿಸುತ್ತಿವೆ. ಇಂತಹ ನಂಜಿನಿಂದ ಪಾರಾಗಲು ಒಂದು ಮಾರ್ಗವನ್ನು ಕಬೀರ ಸೂಚಿಸುತ್ತಾನೆ; ‘ಬರುವಾಗ ಬೈಗಳು ಒಂದೇ ಆಗಿದ್ದರೂ, ಅದನ್ನು ಹಿಂತಿರುಗಿಸಿದಾಗ ಅನೇಕವಾಗುವುದು. ಅದನ್ನು ಹಿಂತಿರುಗಿಸಬೇಡಿರಿ, ಅದು ಒಂದೇ ಆಗಿರಲಿ’– ಇದು ಕಬೀರ ಹೇಳಿದ ಮೌನದ ಮಾರ್ಗ.

ಒಂದು ದಿನ ಬುದ್ಧ ಭಿಕ್ಷೆಗಾಗಿ ಒಂದು ಮನೆಯ ಮುಂದೆ ಬಂದು ಭಿಕ್ಷೆ ಕೇಳಿದ. ಬುದ್ಧನನ್ನು ನೋಡಿದ ಕೂಡಲೆ ಮನೆಯ ಯಜಮಾನ ಕ್ರೋಧಗೊಂಡ. ಕೆಟ್ಟ ಕೋಪದಿಂದ ಬುದ್ಧನನ್ನು ಹೀನಾಮಾನವಾಗಿ ಬೈಯತೊಡಗಿದ. ಅಸಭ್ಯವಾದ ಮಾತುಗಳಿಂದ ಜರಿದ, ಅಪಮಾನಿಸಿದ. ಆದರೂ ಬುದ್ಧ ಬಿರುಗಾಳಿಗೂ ಕದಲದೆ ಶಾಂತವಾಗಿರುವ ಕಡಲಿನಂತೆ, ಮನೆಯ ಯಜಮಾನನ ಬಯ್ಗುಳಕ್ಕೆ ಪ್ರತಿಕ್ರಿಯಿಸದೆ ತಣ್ಣಗೆ ನಿಂತಿದ್ದ. ಇದನ್ನು ನೋಡಿ ಮತ್ತೂ ಕೋಪಗೊಂಡ ಮನೆಯ ಯಜಮಾನ ಇನ್ನಷ್ಟು ಹೊಲಸು ಮಾತುಗಳಿಂದ ಬುದ್ಧನನ್ನು ಜರಿಯತೊಡಗಿದ. ಅದಕ್ಕೆ ಕಾರಣ ಅವನ ಸೋದರನೊಬ್ಬ ಪರಿವ್ರಾಜಕನಾಗಿ ಬುದ್ಧನ ಭಿಕ್ಷು ಸಂಘವನ್ನು ಸೇರಿದ್ದ. ಇದಕ್ಕೆಲ್ಲಾ ಕಾರಣ ಗೌತಮ ಬುದ್ಧನೇ ಎಂದು ಭಾವಿಸಿದ್ದ ಅವನು ಬುದ್ಧನನ್ನು ಬಯ್ಯುವುದರ ಮೂಲಕ ಆ ಸಿಟ್ಟನ್ನು ಇಂದು ತೀರಿಸಿಕೊಂಡ. ಅವನ ಮಾತುಗಳಲ್ಲಿ ಬಹುಕಾಲದಿಂದ ಒಳಗಿದ್ದ ಅಸಹನೆ, ಕ್ರೋಧ ಎಲ್ಲವೂ ಹೊರ ಹೊಮ್ಮುತ್ತಿತ್ತು. ಮನೆಯ ಯಜಮಾನ ನಿರಂತರವಾಗಿ ಬಯ್ಯುತ್ತಿದ್ದರೂ ಬುದ್ಧ ಶಾಂತಚಿತ್ತದಿಂದ ನಿಂತಿದ್ದ. ‘ಬಂಧು, ನಿನ್ನ ಮನೆಗೆ ಮಿತ್ರರು, ಅತಿಥಿಗಳು, ರಕ್ತ ಸಂಬಂಧಿಗಳು, ಜ್ಞಾನಿಗಳು– ಯಾವಾಗಲಾದರೂ ಬರುತ್ತಾರೆಯೇ?’ ಎಂದು ಕೇಳಿದ. ಕೋಪದಿಂದ ಬುಸುಗುಡುತ್ತಿದ್ದ ಅವನು ‘ಎಲ್ಲೋ ಕೆಲವು ವೇಳೆ ಬರುವರು ಗೌತಮ’ ಎಂದು ಹೇಳಿದ. ‘ಹಾಗೆ ಬಂದವರಿಗೆ ನೀನು ವಿವಿಧ ಭಕ್ಷ್ಯ ಭೋಜನಗಳನ್ನು ನೀಡಿ, ಅವರನ್ನು ಸತ್ಕರಿಸುವೆಯಾ ಬಂಧು?’ ಎಂದು ಬುದ್ಧ ಕೇಳಿದ. ‘ಹೌದು ಗೌತಮ. ಅತಿಥಿಗಳಿಗೆ ನನ್ನ ಮನೆಯಲ್ಲಿರುವುದನ್ನು ನೀಡಿ ಅವರನ್ನು ತೃಪ್ತಿಪಡಿಸಿ ಕಳುಹಿಸಿಕೊಡುತ್ತೇನೆ.’ ಎಂದ. ಬುದ್ಧ ಮುಂದುವರೆಸಿ ಕೇಳಿದ ‘ಒಂದು ವೇಳೆ, ನಿನ್ನ ಅತಿಥಿಗಳು ನೀನು ನೀಡಿದ ಭಕ್ಷ್ಯ ಭೋಜನಗಳನ್ನು ಸ್ವೀಕರಿಸದಿದ್ದರೆ, ಅವು ನಿನ್ನವೇ ಆಗುತ್ತವೆ ಅಲ್ಲವೆ ಬಂಧು?’, ‘ಹೌದು, ಅವರು ಸ್ವೀಕರಿಸದಿದ್ದರೆ ಅವು ಖಂಡಿತ ನನ್ನವೇ ಆಗುತ್ತವೆ’ ಎಂದು ಹೇಳಿದ. ‘ಹಾಗಾದರೆ ಕೇಳು, ನೀನು ಇದುವರೆಗೂ ನನ್ನನ್ನು ಬಯ್ದು, ಜರಿದೆಯೆಲ್ಲ ಅವೆಲ್ಲವೂ ಈಗ ನಿನ್ನವೇ. ಏಕೆಂದರೆ ನಾನು ನಿನ್ನ ಬಯ್ಗುಳವನ್ನು, ನಿಂದೆಯನ್ನು ಸ್ವೀಕರಿಸುವುದಿಲ್ಲ. ಆದ್ದರಿಂದ ಅವೆಲ್ಲವೂ ನಿನ್ನವೇ ಆಗುತ್ತವೆ’. ಬುದ್ಧನ ಮಾತು ಕೇಳಿ ಯಜಮಾನ ತಲೆತಗ್ಗಿಸಿದ. ಬೌದ್ಧ ದರ್ಶನದ ವೃಕ್ಷ ನಮಗೆ ನೀಡಿದ ಫಲವಿದು. ಇದೇ ಬುದ್ಧ ನಡೆದ ದಾರಿ.

ದ್ವೇಷ ಹಾಗೂ ಪ್ರತೀಕಾರದ ಮಾತುಗಳಿಂದ ಯಾವ ಬದಲಾವಣೆಯೂ ಆಗಲಾರದು. ಲೋಕ ಕಾರುಣ್ಯದ ಚೆಲುವಿನ ಭಾಷೆಯಿಂದಲೇ ಪರಿವರ್ತನೆ ಸಾಧ್ಯ. ಅಂತಿಮವಾಗಿ ನುಡಿಯೆಂಬುದು ಮಾಣಿಕ್ಯದಂತಿರಬೇಕೆಂದು ಕಲ್ಯಾಣ ನಾಡಿನ ಬಸವಣ್ಣ ನಮಗೆ ಕಲಿಸಿದ್ದಾನೆ. ನಮ್ಮ ಪೂರ್ವಿಕರು ಎಲ್ಲರೂ ಕೂಡಿ ಬಾಳುವ ಸುಂದರವಾದ ಜಗತ್ತನ್ನು ಎಲ್ಲರಿಗಾಗಿ ಬಿಟ್ಟುಹೋಗಿದ್ದಾರೆ. ಅದನ್ನು ನುಡಿ ಮೈಲಿಗೆಯಿಂದ ಅಪವಿತ್ರಗೊಳಿಸಬಾರದು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಒಳ್ಳೆಯ ದಿನ ಅಥವಾ ಕೆಟ್ಟ ದಿನ ಎಂಬುದಕ್ಕೆ ಯಾವುದೇ ವ್ಯಾಖ್ಯಾನವಿಲ್ಲ. ಅದೇನಿದ್ದರೂ ನಿಮ್ಮನ್ನು ಹಾಗೂ ನಿಮ್ಮ ಚಿಂತನೆಗಳನ್ನು ಅವಲಂಬಿಸಿರುತ್ತದೆ.
  —ಎ.ಪಿ.ಜೆ. ಅಬ್ದುಲ್ ಕಲಾಂ

- ಬದುಕಿನ ಕೊನೆಯಲ್ಲಿ ನಮ್ಮ ಪದವಿಗಳು, ಹಣ, ಮಹತ್ಕಾರ್ಯಗಳಿಂದ ನಮ್ಮನ್ನು ಅಳೆಯುವುದಿಲ್ಲ. ಇಲ್ಲದವರಿಗೆ ನಾವು ನೀಡಿದ ಅನ್ನ, ನೆರಳು, ಬಟ್ಟೆಯ ಮೇಲೆ ನಮ್ಮನ್ನು ಅಳೆಯಲಾಗುತ್ತದೆ.
  —ಮದರ್ ತೆರೆಸಾ

- ಧರ್ಮ ಒಂದೇ ಆದ ಮಾತ್ರಕ್ಕೆ ಮನುಷ್ಯರ ಮನೋಧರ್ಮ ಒಂದೇ ಆಗಲು ಸಾಧ್ಯವೇ?
  —ಕೆ.ಎಸ್. ನಿಸಾರ್ ಅಹಮದ್

- ಯಾರು ಬದಲಾಗಲು ಇಚ್ಛಿಸುವುದಿಲ್ಲವೋ ಅಂತಹವರನ್ನು ಅವರ ಪಾಡಿಗೆ ಬಿಟ್ಟುಬಿಡಿ, ಅವರು ನಿದ್ರೆ ಮಾಡಿಕೊಂಡೇ ಇರಲಿ.
  —ರೂಮಿ

- ಕನ್ನಡ ಭಾಷೆ ಉಳಿಯುವುದು ಕತೆ, ಕಾದಂಬರಿಗಳಿಂದ ಅಲ್ಲ. ಅದು ಉಳಿಯುವುದು ಜನರ ಬಳಕೆಯಿಂದ.
  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ